# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ಶಶೀಲ್ ಜಿ. ನಮೋಶಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **164**

**ಉತ್ತರಿಸಬೇಕಾದ ದಿನಾಂಕ** : **14-02-2023**

**ಉತ್ತರಿಸಬೇಕಾದ ಸಚಿವರು** : **ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಸ್ತುತ ರಾಜ್ಯದಲ್ಲಿರುವ ಡಿ.ಸಿ.ಸಿ. ಬ್ಯಾಂಕುಗಳ ಸಂಖ್ಯೆ ಎಷ್ಟು ? | ರಾಜ್ಯದಲ್ಲಿ ಒಟ್ಟು 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. |
| (ಆ) | ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಖಾಲಿಯಿರುವ ಹಿರಿಯ ಸಹಾಯಕ, ಕಿರಿಯ ಸಹಾಯಕ ಹುದ್ದೆಗಳ ಸಂಖ್ಯೆ ಎಷ್ಟು; (ಡಿ.ಸಿ.ಸಿ. ಬ್ಯಾಂಕ್‌ಗಳ ಅನುಗುಣವಾಗಿ ಮಾಹಿತಿಯನ್ನು ನೀಡುವುದು). | ರಾಜ್ಯದ 21 ಡಿಸಿಸಿ ಬ್ಯಾಂಕುಗಳಲ್ಲಿ 263 ಹಿರಿಯ ಸಹಾಯಕ ಹುದ್ದೆಗಳು ಮತ್ತು 546 ಕಿರಿಯ ಸಹಾಯಕ ಹುದ್ದೆಗಳು ಖಾಲಿ ಇರುತ್ತದೆ. ಬ್ಯಾಂಕುವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| (ಇ) | ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವ ಹಿರಿಯ ಮತ್ತು ಕಿರಿಯ ಸಹಾಯಕ ನೌಕರರನ್ನು ಬೇರೆ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ಗೆ ಹಾಗೂ ಸರ್ಕಾರದ ಬೇರೆ ಇಲಾಖೆಗೆ ವರ್ಗಾವಣೆ/ನಿಯೋಜನೆ ಮಾಡಬಹುದೇ; (ಈ ಬಗ್ಗೆ ಮಾಹಿತಿ ನೀಡುವುದು) | ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುವ ಹಿರಿಯ ಮತ್ತು ಕಿರಿಯ ಸಹಾಯಕ ನೌಕರರನ್ನು ಬೇರೆ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕುಗಳಿಗೆ ಹಾಗೂ ಸರ್ಕಾರದ ಬೇರೆ ಇಲಾಖೆಗೆ ವರ್ಗಾವಣೆ/ ನಿಯೋಜನೆ ಮಾಡಲು ಅವಕಾಶವಿರುವುದಿಲ್ಲ. |
| (ಈ) | ಡಿ.ಸಿ.ಸಿ.ಬ್ಯಾಂಕ್‌ಗಳಲ್ಲಿ ಖಾಲಿಯಿರುವ ಹಿರಿಯ ಹಾಗೂ ಕಿರಿಯ ಸಹಾಯಕ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಿಕೊಳ್ಳಲಾಗುವುದು: | ಬ್ಯಾಂಕುಗಳು ತನ್ನ ಅಗತ್ಯತೆಗೆ ಅನುಗುಣವಾಗಿ ಅವಶ್ಯವಿರುವ ಸಿಬ್ಬಂದಿಗಳನ್ನು ನಬಾರ್ಡ್‌ನ ಮಾನವ ಸಂಪನ್ಮೂಲ ಮಾರ್ಗಸೂಚಿಗಳು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 17, 17ಎ, ಹಾಗೂ 18 ರ ಅವಕಾಶಗಳ ರೀತ್ಯಾ ನೇಮಕ ಮಾಡಿಕೊಳ್ಳುವ ಅಧಿಕಾರವು ಆಯಾ ಬ್ಯಾಂಕುಗಳ ಆಡಳಿತ ಮಂಡಳಿಗೆ ಇರುತ್ತದೆ. |

<table>
<tr>
<td>(ಉ)</td>
<td>ಕಲಬುರಗಿ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಖಾಲಿಯಿರುವ ಹುದ್ದೆಗಳು ಎಷ್ಟು, ಅವು ಯಾವುವು, ಯಾವ ಕಾಲಮಿತಿಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು?</td>
<td>ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಖಾಲಿಯಿರುವ ಒಟ್ಟು ಹುದ್ದೆಗಳು-24.<br><br>ಹುದ್ದೆವಾರು ವಿವರ ಈ ಕೆಳಕಂಡಂತಿದೆ:<br>
<table>
<tr><th>ಕ್ರ.ಸಂ</th><th>ಹುದ್ದೆಗಳು</th><th>ಸಂಖ್ಯೆ</th></tr>
<tr><td>1</td><td>ಮುಖ್ಯಕಾರ್ಯನಿರ್ವಹಣಾಧಿಕಾರಿ</td><td>01</td></tr>
<tr><td>2</td><td>ಪ್ರಧಾನ ವ್ಯವಸ್ಥಾಪಕರು</td><td>01</td></tr>
<tr><td>3</td><td>ವ್ಯವಸ್ಥಾಪಕರು</td><td>04</td></tr>
<tr><td>4</td><td>ಹಿರಿಯ ಸಹಾಯಕರು</td><td>07</td></tr>
<tr><td>5</td><td>ಸಿಪಾಯಿ</td><td>11</td></tr>
<tr><td></td><td>ಒಟ್ಟು</td><td>24</td></tr>
</table>
<br>ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಕಲಬುರಗಿ ಇಲ್ಲಿ ಖಾಲಿಯಿರುವ ಹುದ್ದೆಗಳನ್ನು ಬ್ಯಾಂಕಿನ ಸೇವಾ ನಿಯಮಗಳನ್ನು ಅನುಸರಿಸಿ ಹಾಗೂ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಗೆ ಅವಕಾಶವಿರುತ್ತದೆ.</td>
</tr>
</table>

**ಕಡತ ಸಂಖ್ಯೆ: ಸಿಒ 32 ಸಿಸಿಬಿ 2023**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು.